DA-363
T.P-2

(1)

Reg No B G 155 30-8-1968

SATYAVADI Daily, MYSORE 4

52 nd Year of Publication

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸ್ಥಾಪಕರು : ಅರಮನೆ ಸರಸ್ತೀದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಕಿಂ. ಎಸ್. ಕೃಷ್ಣರಾವ್ [2ಪೈಸೆ

ಕಾಮಗಾರಿ ಇಲಾಖೆ ಕೆಲಸಗಾರರ ಪ್ರತಿಭಟನೆ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯೈ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆರಿರಾ ಟಾಕೇಸಿನ್ಹವರು, ಪದ್ಮಭೂಷಣ ನೇ.ರಾದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಉದಾರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇನೆ.

ಸಂಪಾದಕ : ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಜೇಳುಗಳು

ಜೇಳುಗಳ ವಿಶೇಷತೆಯೇನೆಂದರೆ ಅವು ಆರು ತಿಂಗಳವರೆಗೆ (ಶರತ್ಕಾಲದಿಂದ ವಸಂತ ಕಾಲದವರೆಗೆ) ಆಹಾರವನ್ನು ಸೇವಿಸದೆಯೇ ಜೀವಿಸಬಲ್ಲವು. ಸ್ಕ್ರೆಂಚ್ ತಜ್ಞರು ನಡೆಸಿದ ಪ್ರಯೋಗ ಪ್ರಕಾರ ಒಂದು ಜೇಳು ಉಪವಾಸದ ಎಲ್ಲಾ ದಾಖಲೆಗಳನ್ನೂ ಮೀರಿಸಿದೆ. ಅದು 420 ದಿನಗಳವರೆಗೆ ಆಹಾರವಿಲ್ಲದೆ ಜೀವಿಸಿತ್ತು.

ಡಾ॥ ಮೋದಿಯವರ ನೇತ್ರ ಶಿಬಿರ

ಬೆಂಗಳೂರು ಬಸವನಗುಡಿಯಲ್ಲಿನ ವಾಸವೀ ಧರ್ಮಾಚಾರಿಯಲ್ಲಿ ನೇತ್ರ ದಾನಿ ಪದ್ಮಶ್ರೀ ಡಾ ॥ ಎಂ. ಸಿ. ಮೋದಿಯವರ ಉಚಿತ ನೇತ್ರಚಿಕಿತ್ಸಾ ಶಿಬಿರವನ್ನು ತಾ ॥ 10 ರಂದು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಉದ್ಘಾಟಿಸುವರು.

★

ಶೃಂಗೇರಿಯಲ್ಲಿ

ಶ್ರೀ ಗಣಪತಿ ವಾಕ್ಯಾರ್ಥ ಮಹಾಸಭೆ ಶ್ರೀ ವಿನಾಯಕ ಚತುರ್ಥಿಯಿಂದ ಪೂರ್ಣಿಮೆವರೆಗೆ ಶ್ರೀ ಶೃಂಗೇರಿ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ನಾಲ್ಕು ಸೀಕೆ ಸಾರಾಯಿ ಕಳವು

ನವದೆಹಲಿ— ಕೆಲವು ತಿಂಗಳ ಹಿಂದೆ ಉಪ ಸಂಸ್ಕೃತಿಗಳೊಬ್ಬರ ಮನೆಯಲ್ಲಿ ಆದ ಕಳ್ಳತನದ ಸಂಬಂಧದಲ್ಲಿ ಏನೂ ಪ್ರಗತಿಯಾಗಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಗಿದೆ.

ಡಿ ಎಂ ಕೆ ಅಧರ್ಮಿಯಲ್ಲ !

ನುದಶಾಪು— ಹಿಂದೂಗಳು ಡಿ ಎಂ ಕೆ ನಾಸ್ತಿಕ ನೀತಿಗೆ ಬಲಿಯಾಗುತ್ತಿದ್ದಾರೆಂದು ಶಾಸನ ಸಭೆಯಲ್ಲಿ ಒಬ್ಬರು ಹೇಳಿದಾಗ, ಮುಖ್ಯಮಂತ್ರಿ ಶ್ರೀ ಅಣ್ಣಾ ದೊರೈ 'ನಾವು ಅಧರ್ಮಿಗಳಲ್ಲ : ವಿನಾಯಕನ ಚೌತಿ ದಿನ ಸರ್ಕಾರಿ ಕಚೇರಿಗಳಿಗೆ ರಜಾ ಕೊಟ್ಟಿದ್ದದ್ದು ಇದನ್ನು ಸಮರ್ಥಿಸುವದೆಂದು ಹೇಳಿದರು – ಸರ್ಕಾರಿ ಕಚೇರಿಗಳಿಂದ ಹಿಂದೂ ದೇವರ ಪಠ ತೆಗೆದುಹಾಕಲು ಆಜ್ಞೆ ಮಾಡಿರುವಂತೆ, ನಿಮ ಕಚೇರಿ ಕಾಂಪೌಂಡಿನಲ್ಲಿರುವ ಚರ್ಚು, ಮಸೀದಿಗಳ ಶಿಲುಬೆ ತೆಗೆಯಲು ಸಾಮರ್ಥ್ಯವಿದೆಯೇ ಎಂದು ಒಬ್ಬ ಸದಸ್ಯರು ಪ್ರಶ್ನಿಸಿದರು.

ಧನವಂತರ ಅಪಹಾರ

ಜಾಬಲಪುರ— ಪೋಲೀಸು ಸಿಬ್ಬಂದಿಯಲ್ಲಿ ಧರಿಸಿದ್ದ ಸಶಸ್ತ್ರ ದರೋಡೆಗಾರರು ಮಿರ್ಜಾಪುರ ಗ್ರಾಮದಲ್ಲಿಯ ನಾಲ್ವರು ಧನವಂತರನ್ನು ಅಪಹರಿಸಿಕೊಂಡುಹೋಗಿದ್ದು ಅವರ ಬಿಡುಗಡೆಗೆ ತಲಾ ರೂ. 25000 ಕೇಳಿಕೆ ಹಾಕಿದ್ದಾರೆ.

★

ತ್ಯಾಗರಾಜರ ಕೃತಿ

ಮದರಾಸು— ತ್ಯಾಗರಾಜರ 20 ಕೃತಿಗಳು ಪತ್ತೆಯಾಗಿದೆ ಎಂದು ವಿದ್ವಾಂಸರೊಬ್ಬರು ಶಾಸನ ಸಭೆಯಲ್ಲಿ ಹೇಳಿದರು

★

ಹಿಂದೂಮತದ ಮಹಿಮೆ

ಬೆಂಗಳೂರು— ಯಾರು ಬೇಕಾದರೂ ತಮ್ಮ ಇಷ್ಟ ದೇವತೆಯನ್ನು ಪೂಜಿಸಲು ಅನುಕೂಲವಿರುವ ವಿಶ್ವದ ಏಕೈಕ ಮತವು ಹಿಂದೂಮತವೆಂದೂ, ಆದ್ದರಿಂದ ತಾವು ಹಿಂದು ವೆಂದು ಹೇಳಿಕೊಳ್ಳುವುದು ಅಪಮಾನಕರವಲ್ಲವೆಂದೂ, ಅಮೇರಿಕಾದ ಮಿನಸೋಟಾ ವಿಶ್ವವಿದ್ಯಾಲಯದ ಸಂಸ್ಕೃತ ವ್ಯಾಸಂಗದ ಡೈರೆಕರ್ ಮತ್ತು ಹಿಂದೂ ಮಿಷನರಿ ಆದ ಪಾಂಡಿತ್ ಉಷಾರಬುಧರು ಹೇಳಿದರು.

ಮಳೆಗಾಗಿ

ಗುಲ್ಬರ್ಗ— ಮಳೆ ದೇವರನ್ನು ಒಲಿಸಿಕೊಳ್ಳಲು, ಪೂಜೆಗಾಗಿ ಲಿಂಗಾಯಿತ ಕೋಮಿನವರು 101 ಮಡಿಕೆ ತುಂಬ ನೀರನ್ನು ಶ್ರೀ ಶರಣಬಸವೇಶ್ವರ ದೇವಾಲಯಕ್ಕೆ ಮೆರವಣಿಗೆಯಲ್ಲಿ ತೆಗೆದುಕೊಂಡುಹೋದರು ಜಿಲ್ಲೆಯಲ್ಲಿ ಮಳೆಯಿಲ್ಲದೆ ಜನರು ತುಂಬಾ ಸಂಕಟಕ್ಕೀಡಾಗಿದ್ದಾರೆ.

★

ಮಹಾಜನ-ಕಮಿಷನ್ ವರದಿ

ಬೆಂಗಳೂರು— ಮಹಾಜನ ಕಮಿಷನ್ ವರದಿಯನ್ನು ಕೂಡಲೇ ಜಾರಿಗೆ ತರಬೇಕೆಂಬ ಮೈಸೂರಿನ ಬಲಯುತ ಕೇಳಿಕೆಯು ಮುಂದಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಬರಬಹುದೆಂದು ಹೇಳಲಾಗಿದೆ.

ಅನಾವೃಷ್ಟಿ ಪರಿಹಾರ

ನವದೆಹಲಿ— ಆಂಧ್ರಪ್ರದೇಶ, ಮೈಸೂರು, ಮದರಾಸು, ಮಹಾರಾಷ್ಟ್ರಗಳಲ್ಲಿ ತೀವ್ರ ಅನಾವೃಷ್ಟಿಯಿಂದ ಜನರಿಗೆ ಒದಗಿರುವ ಕಷ್ಟ ನಿವಾರಣೆಗೆ ಕೇಂದ್ರವು ಪರಿಹಾರಕ್ಕೆ ಹೆಚ್ಚು ನೆರವು ನೀಡಬೇಕೆಂದು ಲೋಕಸಭೆಯಲ್ಲಿ ಸದಸ್ಯರು ತಿಳಿಸಿದರು,

★

ಚುನಾವಣೆ ಖರ್ಚು

ನವದೆಹಲಿ— ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ಬೀಹಾರಿನಲ್ಲಿ ಮುಧ್ಯವರ್ತಿ ಚುನಾವಣೆಗೆ ಕೇಂದ್ರ ಸರಕಾರಕ್ಕೆ ರೂ. 2.85 ಲಕ್ಷ ಖರ್ಚು ಬೀಳುವ ಸಾಧ್ಯತೆಯಿದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಮ್ಯೂಜಿಯಂನಲ್ಲಿ ಕಳ್ಳತನ

ನವದೆಹಲಿ— ನ್ಯಾಷನಲ್ ಮ್ಯೂಜಿಯಂನಲ್ಲಿ ಪುರಾತನ ಆಭರಣಗಳು ಮತ್ತು ಹಳೇ ನಾಣ್ಯಗಳು ಕಳವಾಗಿದೆ.

★

ಪ್ರತಿಭಟನಾ ಮೆರವಣಿಗೆ

ಗುಲ್ಬರ್ಗ— ಗ್ಯಾಂಗ್‌ಮೆನ್ ಮತ್ತು ಮೇಸ್ತ್ರಿಗಳನ್ನು ತೆಗೆದುಹಾಕುತ್ತಿರುವದನ್ನು ಪ್ರತಿಭಟಿಸಿ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ 2000 ಕಾರ್ಮಿಕರು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

●

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಸಾಮಾನ್ಯಜನರು ದೇವಸ್ಥಾನದ ಬಗ್ಗೆ ಟೀಕೆ ಮಾಡುವುದು, ದೇವರೇ ಇಲ್ಲವೆಂದು ನಾಸ್ತಿಕವಾದ ಮಾಡುವುದು ಮುಂತಾದ ವ್ಯವಹಾರಕೆಳಲ್ಲಿ ನಿರತರಾಗಿರುತ್ತಾರೆಯೆ ಹೊರತು, ದೇವಾಲಯಕ್ಕೆ ವಾರಕ್ಕೊಮ್ಮೆಯಾದರೂ ಹೋಗಬೇಕೆಂದ ಭಾವನೆ ಹೊಂದುವುದಿಲ್ಲ. ಇದೇರೀತಿ ಮುಂದುವರಿದಲ್ಲಿ ಕ್ಷಿಪ್ರದಲ್ಲಿಯೇ ಅನೇಕ ದೇವಸ್ಥಾನಗಳು ನಾಮಾವಶೇಶವಾಗಬಹುದು, ತನ್ಮೂಲಕ ಸಮಾಜಕ್ಕೆ ಧಾರ್ಮಿಕ ರೀತ್ಯಾ ಹಾನಿಯುಂಟಾಗಬಹುದು.

ಇದಕ್ಕೆ ಪರಿಹಾರವನ್ನು ತಿಳಿದಂಥ ಜ್ಞಾನಿಗಳು ಎಲ್ಲಾ ಕಡೆ ವಿಚಾರಮಾಡಿ, ಯೋಪ್ರಚಾರ ಮಾಡಬೇಕು, ನಮಗೆ ತೋರುವುದೇನೆಂದರೆ, ದೇವಾಲಯದ ಆಡಳಿತವು ಧರ್ಮವಿರೋಧಿಯಾದ ಸರ್ಕಾರದ ಕೈಯಲ್ಲಿರಬಾರದು. ಪ್ರತಿಯೊಂದು ದೇವಸ್ಥಾನವೂ ಒಂದು ಪ್ರತ್ಯೇಕ ಸಂಸ್ಥೆಯೆಂದು ಭಾವಿಸಬಾರದು. ಭಾರತದಲ್ಲಿರುವ ದೇವಾಲಯಗಳು ಪಾಂಚರಾತ್ರ, ವೈಖಾನಸ, ಶೈವ, ವೀರಶೈವ, ಜೈನ, ಬೌದ್ಧ, ಎಂಬ ಆರು ಆಗಮಗಳಲ್ಲಿ ಯಾವುದಾದರೂ ಒಂದು ಆಗಮಕ್ಕೆ ಸೇರಿರುತ್ತದೆ. ಪ್ರತಿಯೊಂದು ಆಗಮದ ದೇವಾಲಯಗಳಿಗೆ ಒಂದೊಂದು ಸಂಸ್ಥೆಯನ್ನು ರಚಿಸಿ, ಯೋಗ್ಯ ವ್ಯಕ್ತಿಗಳಿಂದ ಕೂಡಿರುವ ಆ ಸಂಸ್ಥೆಗೆ ಆಗಮದ ಎಲ್ಲ ದೇವಾಲಯಗಳೂ ಒಳಪಟ್ಟಬೇಕು. ಪ್ರತಿಯೊಂದು ದೇವಾಲಯದಲ್ಲಿಯೂ ಬಾಲಕರಿಗೆ ವೇದಪಾಠ ಮತ್ತು ಸಂಸ್ಕೃತ ಬಾಲಪಾಠ ಕಲಿಸುವ ಏರ್ಪಾಡುಮಾಡಬೇಕು. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿಯೂ ಆಗಮಶಾಸ್ತ್ರವನ್ನು ಕಲಿಸುವ ಪಾಠಶಾಲೆಗಳಿರಬೇಕು. ದೇವಾಲಯದ ಅರ್ಚಕರೇ ಮುಂತಾದ ಸ್ಥಾನಗಳಿಗೆ ಅರ್ಹರಾದ ವ್ಯಕ್ತಿಗಳನ್ನು ಮಾತ್ರವೇ ನೇಮಿಸಬೇಕು. ಅವರುಗಳಿಗೆ ಜೀವನ ನಡೆಸಲು ಅನುಕೂಲವಿರುವಂತೆ ವೃತ್ತಿಗಳನ್ನು ಕಲ್ಪಿಸಬೇಕು. ಸಂಬಳ ತೆಗೆದುಕೊಂಡು ಕೆಲಸ ಮಾಡುವುದು ಶಾಸ್ತ್ರರೀತ್ಯಾ ಸರಿಯಾದ ಕ್ರಮವಲ್ಲ. ಪ್ರತಿಯೊಂದು ದೇವಾಲಯದಲ್ಲಿಯೂ ಅಪರಾಹ್ಣ ಕಾಲದಲ್ಲಿ ಇತಿಹಾಸ ಪುರಾಣಾದಿ ಗ್ರಂಥಗಳ ಪಠಣ ಪ್ರವಚನ ನಿತ್ಯವೂ ನಡೆಯುವಂತೆ ಏರ್ಪಡಿಸಬೇಕು. ಎಲ್ಲರೂ ವಾರಕ್ಕೊಮ್ಮೆಯಾದರೂ ಸ್ಥಳೀಯ ದೇವಸ್ಥಾನಕ್ಕೆ ಹೋಗಿ ಸಾಮೂಹಿಕ ಪ್ರಾರ್ಥನೆ ನಡೆಸುವಂತೆ ಏರ್ಪಡಿಸಬೇಕು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations, and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4

ty Printi g — Neat Binding

Lakshminarasimha Press

Sivarampet, Mysore

ಆಕರ್ಷಕ ಏಜೆನ್ಸೀಸ್

ಬಿಲ್ಡಿಂಗ್ ಮೆಟೀರಿಯಲ್ಸ್ ಮೈಸೂರು

ಎಲ್ಲ ವಿಧದ ಅಯುರ್ವೇದ ಔಷಧಗಳನ್ನು ಸಿದ್ಧವಾಗಿ ದೊರೆಯುವಂತೆ

ವುಡ್‌ಲಾಂಡ್ಸ್ ಜನಪ್ರಿಯ 4 ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಘರ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು

ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ 30-8-68 ರಿಂದ

ಚಿತ್ತಾಕರ್ಷಕ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ

ಪಾತ್ರ— ಶಮ್ಮಿ ಕಪೂರ್, ರಾಜಶ್ರೀ, ಮಹಮ್ಮದ್, ಪ್ರಾಣ್, ಮಹಮೂದ್ (ಜೂ)

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದಕ್ಷಿಣಾಮ್ನಾಯಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಸ್ವಾಮಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ವಾತಾವರಣ, ತತ್ಪಾಹಾರ, ಪಶುವೈದ್ಯ, ಪಶುಪಾಲನೆ ಎಲ್ಲವೂ ಸಮಗ್ರವಾಗಿ ಪ್ರಚಾರ ಮಾಡಬೇಕಾಗಿದೆ ; ವಾರ್ಷಿಕ ಚಂದಾ 50 ನ್ಯೆ ಪೈ

— ಗೋರಕ್ಷಣಾ ವ್ಯವಸ್ಥಾಪಕರು ಎನ್ನುತ್ತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ-ಕಳಿದಿರುವವರು ಇವಂಗ್ಲೆ ಚಂದಾ ವಾಪಾಸುಮಾಡಬೇಕಾಗಿ ವಿನ್ನಂತಿ

ಡಾ|| ಬಿ ಎಸ್ ನಾರಾಯಣ್, ಶ್ರೀ ಪಿ.ಎನ ವಿಶ್ವನಾಥ ಜಯನಗರ, ಬೆಂಗಳೂರು

ಶ್ರೀ ಬಿ ಬಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಸ್ಗನಹಳ್ಳಿ

ಗೋರಕ್ಷಣಾ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯ ಉದ್ದೇಶವಾಗಿ ಕಾರ್ಯಗಳು ಪ್ರಚಾರವಾಗಿ ನಡೆಯುತ್ತಿವೆ

Edited Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4